ಶ್ರೀ ಪಿ.ಸಿ. ಮೋಹನ್	ಚಿಕ್ಕಪೇಟೆ	ಕನ್ನಡ
ಶ್ರೀ ಮುನಿಯಪ್ಪ ಮುದ್ದಪ್ಪ ಬಿ.	ಕಲ್ಮಲ	ಕನ್ನಡ

11. ಪ್ರಮಾಣ ವಚನ ಸ್ವೀಕಾರದ ಬಗ್ಗೆ ಆಕ್ಷೇಪಣೆ (ತೀರ್ಪನ್ನು ಕಾಯ್ದಿರಿಸಲಾಗಿದೆ)

Sri M.P. Prakash:- Sir, with the permission of the Chair for the benefit of our Members ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದಂತೆ ರಾಜ್ಯಾಂಗದ ವಿಧಿ ವಿಧಾನದ ಪ್ರಕಾರವೂ ಕೂಡ 188ನೇ ಕಲಂ ಈ ತರಹ ಹೇಳುತ್ತದೆ.

"Every Member of the Legislative Assembly or the Legislative Council of the State shall before taking his seat make and subscribe before the Governor or some person appointed in this behalf by him an oath or affirmation according to the form set out for the purpose in the III Schedeule".

ಆ ಥರ್ಡ್ ಶೆಡ್ಯೂಲ್ ಪ್ರಕಾರ ಇಲ್ಲಿ ಪ್ರಿಸ್ಕ್ರೈಬ್ ಆಗಿರುವುದರಿಂದ ಅದರಲ್ಲಿ ಏನೂ ವ್ಯತ್ಯಾಸ ಮಾಡದಂತೆ ತೆಗೆದುಕೊಳ್ಳಬೇಕಾಗುತ್ತದೆ.

ಛೇರ್ಮನ್:- ಕನ್ನಡದಲ್ಲಿ ಇದು ನಮ್ಮ ನಿಯಮಾವಳಿಯ ಪೇಜ್ ನಂಬರ್ 4ರಲ್ಲಿ ಇದೆ ನೋಡಿ.

ಶ್ರೀ ಎಂ.ಪಿ. ಪ್ರಕಾಶ್:- ಬೇರೆ ಮಾನ್ಯ ಸದಸ್ಯರ ಅವಗಾಹನೆಗಾಗಿ ತರುತ್ತಿದ್ದೇನೆ. ಬೇರೆ ತರಹ ಮಾಡಿದ್ದರೆ ಇದು ಅಸಿಂಧು ಆಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್:- ಯಾವ ಹೆಸರಿನಲ್ಲಿ ತೆಗೆದುಕೊಂಡರೂ ಸಹ ನಿಯಮಾವಳಿಯಲ್ಲಿ ಏನು ಹೇಳಿದೆ. ಅದೇ ಪ್ರಕಾರ ನಡೆಯಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್:- ಆದು ಬೇರೆ ನಡೆಯುವ ವಿಚಾರ ಬೇರೆ, ಕಾನೂನು ಬೇರೆ.

(ಗೊಂದಲ)

Sri K.R. Ramesh Kumar:- Form is not important. Content is important.

Sri M.P. Prakash:- No doubt content is important, but we are running the entire assembly as per the procedures that we have laid down.

Sri K.R. Ramesh Kumar:- Form is only to guide. Constitution is binding.

Sri M.P. Prakash:- It is binding. ದಯವಿಟ್ಟು ಕೇಳಿ. ತಾವೂ ಕೂಡ ಸಭಾಧ್ಯಕ್ಷರಾಗಿ ಹಿರಿಯ ಸದಸ್ಯರಾಗಿ ಕೆಲಸ ಮಾಡಿದ್ದೀರಿ. ನಿಯಮಾವಳಿಗಳ ಪ್ರಕಾರ ನಮ್ಮ ನಡವಳಿಕೆಗಳು ಇರಬೇಕು. ನಾವು ಅಂತರ್ಗತವಾಗಿ ಅಷಾಢಭೂತಿಗಳಾಗಿದ್ದರೆ ಅದು ಏನೂ ಪ್ರಶ್ನೆ ಇಲ್ಲ. ಆದರೆ ಇಲ್ಲಿ ನಿಯಮಾವಳಿಗಳ ಪ್ರಕಾರ ನಡೆಯಬೇಕಾಗಿರುವುದರಿಂದ ಯಾವುದು

ರಾಜ್ಯಾಂಗದಲ್ಲಿ ವಿಧಿವತ್ತಾಗಿ ಇದೆ, ಅದಕ್ಕಾಗಿ ಆಗಿರುವಂತಹ ನಮೂನೆಯ ಅರ್ಜಿ ಇದೆ, ನಮೂನೆಯಾದಂತಹ ಒಂದು ಪ್ರಮಾಣ ಪತ್ರ ಇದೆ. ಅದರ ಪ್ರಕಾರ ನಾವು ಪ್ರತಿಜ್ಞಾ ವಚನ ಸ್ವೀಕಾರ ಮಾಡಬೇಕು. ಅದರಂತೆ ನಡೆಯದೇ ಇರತಕ್ಕದ್ದು ಸರಿಯಲ್ಲ. ಅದು ಅವನ ಅಂತರಾತ್ಮ ಮತ್ತು ಸಾಕ್ಷಿಗೆ ಬಿಟ್ಟದ್ದು.

ಛೇರ್ಮನ್:– ದಯಮಾಡಿ ಅದರ ಬಗ್ಗೆ ಚರ್ಚೆ ಬೇಡ ಬಿಡಿ. ಈಗ ಪ್ರಮಾಣ ವಚನ ಮುಗಿಯಲಿ.

(ಗೊಂದಲ)

ಛೇರ್ಮನ್:– ಈಗ ಪ್ರಮಾಣ ವಚನ ಮುಗಿಯಲಿ ಮಾನ್ಯ ಹೆಗಡೆ ಅವರೇ ದಯಮಾಡಿ ಇದಕ್ಕೋಸ್ಕರ ಇಲ್ಲಿ ಈಗ ಚರ್ಚೆ ಬೇಡ.

xxx xxx xxx

Sri M.P. Prakash:- There is a judgement in A.I.R. 1970.

"In this case as we have already noted the essential requirement of the Article 173 read with Form 7A was that the person taking the oath or making the affirmation would bear true faith and allegiance to the Constitution and uphold the sovereignty and integrity of India. The words which proceed this portion are merely descriptive of the person and of his nomination as a candidate. It is reasonable to think that the mere misprint in the form of a oath or a mere inaccuracy in rendering the expression Legislative Assembly in Gujurathi would not be fatal to the election of a candidate if otherwise valid." ಎಂದು ಇದರಲ್ಲಿ ಹೇಳುತ್ತಾರೆ. ನೇರವಾಗಿ ಇದಕ್ಕೆ ಸಂಬಂಧ ಇಲ್ಲ. ಆದರೆ ಅಫಮೇರ್ಷನ್‌ನಲ್ಲಿ ಕ್ಯಾಂಡಿಡೇಟ್ ಆಗಿ ತೆಗೆದುಕೊಳ್ಳಬೇಕಾದರೆ.

Sri K.R. Ramesh Kumar:- Constitution, for the sovereignty of the country... yes. We accept. In whose name they should swear. ಎನ್ನುವುದಕ್ಕೆ ಫಾರ್ಮ್‌ನಲ್ಲಿ ಆಪ್ಷೆನ್ ಕೊಟ್ಟಿದ್ದಾರೆ. ಅನೇಕ ಜನ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕಾರ ಮಾಡುವ ವೇಳೆಗೂ ಕೂಡ ತಮ್ಮ ತಮ್ಮ ಮನಸ್ಸಿಗೆ ಬಂದ ಹಾಗೆ ಛೇಂಜ್ ಮಾಡಿಕೊಳ್ಳುತ್ತಾರೆ. ಭಗವಂತ ಅಥವಾ ಸತ್ಯ ನಿಷ್ಠೆ ಎಂದು ಎರಡು ಇದೆ. ಅವರೆಡನ್ನೂ ಬಿಟ್ಟು ಮೂರನೆಯದನ್ನು ಆಯ್ಕೆ ಮಾಡಿಕೊಂಡರೆ.....

ಶ್ರೀ ಎನ್.ಯೋಗೀಶ್ ಭಟ್:– ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಪರಮೇಶ್ವರ ಎಂಬ ವರ್ಡ್ ಇದೆಯಲ್ಲಾ, ಅದರ ಇಂಟರ್‌ಪ್ರಿಟೇಶನ್ ಕೊಡಿ. ಅದನ್ನು ಡಿಫೈನ್ ಮಾಡಿದ್ದಾರಾ? ಪರಮೇಶ್ವರ ಎಂದು ಹೇಳುವಂತಹ ಹೆಸರಿನಲ್ಲಿ ಅಥವಾ ಸತ್ಯ, ನಿಷ್ಠೆ.

---

xxx ಮಾನ್ಯ ಹಂಗಾಮಿ ಅಧ್ಯಕ್ಷರ ಆದೇಶದ ಮೇರೆಗೆ ದಾಖಲು ಮಾಡಿರುವುದಿಲ್ಲ.

ಶ್ರೀ ಎಂಪಿ. ಪ್ರಕಾಶ್:– ಭಗವಂತ ಎಂದು ಇದೆ.

ಶ್ರೀ ಎನ್. ಯೋಗೀಶ್ ಭಟ್:– ಭಗವಂತ ಎಂದು ಹೇಳುವ ಬಗ್ಗೆ ತಾವು ಡಿಫೈನ್ ಮಾಡುತ್ತೀರಾ? ಅವರವರಿಗೆ ನಂಬಿಕೆ ಇರುವಂತಹ ಆಧಾರದಲ್ಲಿ ಅವರು ಅದನ್ನು ಇಂಟರ್‌ಪ್ರಿಟ್ ಮಾಡುತ್ತಾರೆ. ಕೆಲವರಿಗೆ ತಂದೆ–ತಾಯಿಗಳೇ ಭಗವಂತ ಇರಬಹುದು. ಕೆಲವರಿಗೆ ಅವರು ನಂಬಿರುವಂತಹ ಕುಲದೇವತೆಯೇ ಭಗವಂತ ಇರಬಹುದು.

(ಗೊಂದಲ)

ಛೇರ್ಮನ್:– ಪ್ರಮಾಣ ವಚನ ಸಮಯದಲ್ಲಿ ಹೆಚ್ಚಿಗೆ ಚರ್ಚೆ ಬೇಕಾಗಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್:– ಈಗ ಇದೊಂದು ವಿಚಾರ ಚರ್ಚೆ ಮಾಡತಕ್ಕಂಥ ವಿಷಯ ಅಲ್ಲ. ಇದು ಏನಿದ್ದರೂ ಸಂವಿಧಾನದಲ್ಲಿ ಯಾವ ತರಹ ಇದೆ, ಅದೇ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ನಮಗೆ ಪರಮಾತ್ಮ ಎಂದರೆ ಮತ್ತೊಂದು ಹೆಸರನ್ನು ಹೇಳಿದರೆ ಅದು ಭಗವಂತ ಎನ್ನುವಂತಹ ರೀತಿಯಲ್ಲಿ ಅದನ್ನು ತಾವು ಪರಿಭಾವಿಸಬಹುದು. ಹಾಗೆ ಪರಿಭಾವಿಸಿದರೂ ಕೂಡ ಭಗವಂತನ ಹೆಸರಿನಲ್ಲಿ ಇರಬೇಕಾಗುತ್ತದೆ. 'solemnly affirm or in the name of God' ಎಂದು ಇದನ್ನು ಥರ್ಡ್ ಶೆಡ್ಯೂಲ್‌ನಲ್ಲಿ ಪ್ರಿಸ್ಕ್ರೈಬ್ ಮಾಡಿದ್ದಾರೆ. ಇದನ್ನು ಬಿಟ್ಟು ಬೇರೆ ಮಾಡಿದರೆ ಆಸಿಂಧು ಆಗುತ್ತದೆ ಎನ್ನತಕ್ಕ ಬಗ್ಗೆ ಅನೇಕ ಜಡ್ಜ್‌ಮೆಂಟ್‌ಗಳು ಇವೆ. ಹಿಂದೆ ಮಂತ್ರಿಗಳು ಆಗಿದ್ದಂತಹವರು ಬಿಟ್ಟು ಬೇರೆ ಮಾಡಿದಂತಹ ಸಂದರ್ಭದಲ್ಲಿ, ಮಾನ್ಯ ರಾಜ್ಯಪಾಲರು ಆಕ್ಷೇಪಣೆ ಮಾಡಿರತಕ್ಕ ಘಟನೆ ಇದೆ. ಮತ್ತೆ ಅವರ ಮುಂದೆ ಹೋಗಿ ಪ್ರಮಾಣ ವಚನ ಸ್ವೀಕಾರ ಮಾಡಿದಂತಹ ಉದಾಹರಣೆಗಳೂ ಕೂಡ ಇವೆ.

ಶ್ರೀ ವಾಟಾಳ್ ನಾಗರಾಜ್:– ತಾವು ಇದರ ಬಗ್ಗೆ ಒಂದು ತೀರ್ಪನ್ನು ಕೊಡಬೇಕು.

ಛೇರ್ಮನ್:– ಇಲ್ಲಿ ಹಂಗಾಮಿ ಸ್ವೀಕರ್ ಆಗಿದ್ದಂಥವರು ಈಗಾಗಲೇ ರೂಲಿಂಗ್ ಕೊಟ್ಟಿದ್ದಾರೆ. ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಬೇಡ. ಪ್ರಮಾಣ ವಚನ ಮುಗಿಯಲಿ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:– ತಾವು ಛೇರ್‌ನಲ್ಲಿ ಕುಳಿತಾಗ ತಾವು ಅಧ್ಯಕ್ಷರಾಗುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಸ್ವೀಕರ್ ಛೇರ್‌ನಲ್ಲಿ ಕುಳಿತಾಗ ಅವರು ಹಂಗಾಮಿ ಎಂದು ಬರುವುದಿಲ್ಲ, ಅವರು ಸ್ವೀಕರೇ ಆಗುತ್ತಾರೆ.

ಛೇರ್ಮನ್:– ಮಾನ್ಯ ಗೌರವಾನ್ವಿತ ಸದಸ್ಯರು ಕೇಳಿದ ಪ್ರಕಾರ..

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ಕೇಳಿ. ಆ ಸ್ಥಾನದಲ್ಲಿ ಕುಳಿತ ಮೇಲೆ ಹಂಗಾಮಿ ಎನ್ನತಕ್ಕ ಪ್ರಶ್ನೆ ಬರುವುದಿಲ್ಲ. ಅದು ಅಧ್ಯಕ್ಷರ ಪೀಠ. ಆ ಪೀಠದಲ್ಲಿ ಕುಳಿತ ಅಧ್ಯಕ್ಷರು ರೂಲಿಂಗ್ ಕೊಡಬೇಕು. ಹಂಗಾಮಿಯವರು ಕೊಡಬಾರದು, ಪರ್ಮನೆಂಟ್‌ನವರು ಕೊಡಬೇಕು ಎನ್ನತಕ್ಕ ಪ್ರಶ್ನೆ ಬರುವುದಿಲ್ಲ. ರೂಲಿಂಗ್ ಕೊಡಬೇಕಾಗಿರುವುದು ಛೇರ್.

ಗೊಂದಲ

ಛೇರ್ಮನ್:– ತಾವು ಕೇಳುವ ಪ್ರಕಾರ ಏನಾದರೂ ರೂಲಿಂಗ್ ಕೊಡಬೇಕಾದರೆ ಮುಂದೆ ಕೊಡುತ್ತೇವೆ, ಈಗ ಪ್ರಮಾಣ ವಚನ ನಡೆಯಲಿ.

ಗೊಂದಲ

ಛೇರ್ಮನ್:– ಇವತ್ತಿನ ಕಾರ್ಯಕ್ರಮದ ಪಟ್ಟಿಯಲ್ಲಿ ಪ್ರಮಾಣ ವಚನ ಕಾರ್ಯಕ್ರಮ ಇದೆ.

ಶ್ರೀ ವಾಟಾಳ್ ನಾಗರಾಜ್:– ನೀವು ತೀರ್ಮ ಕೊಡುವವರೆಗೂ ಈ ಸದನವನ್ನು ಮುಂದೂಡಿ.

ಶ್ರೀ ಬಸವರಾಜ ರಾಯರೆಡ್ಡಿ:– ಇದು ರೂಲಿಂಗ್ ಪ್ರಶ್ನೆ ಅಲ್ಲ.

ಛೇರ್ಮನ್:– ದಯಮಾಡಿ ಪ್ರಮಾಣ ವಚನ ಮುಂದುವರಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಸಂವಿಧಾನಬದ್ಧವಾಗಿ ಏನು ಮಾಡಬೇಕೋ ಅದನ್ನು ಮಾಡಬೇಕು.

ಛೇರ್ಮನ್:– ಇದಕ್ಕೋಸ್ಕರ ಏಕೆ ಇಷ್ಟು ದೊಡ್ಡ ಚರ್ಚೆ ಎಂಬುದು ನನಗೆ ಅರ್ಥ ಆಗುತ್ತಿಲ್ಲ.

XXX XXX XXX

Protem Speaker:- (Sri R.V. Deshpande in the Chair).

ಶ್ರೀ ಬಿ.ಎಸ್. ಯಡಿಯೂರಪ್ಪ:– ಕೆಲವು ಸಂಪ್ರದಾಯಗಳು ಇವೆ.

ಶ್ರೀ ಬಸವರಾಜ್ ರಾಯರೆಡ್ಡಿ : ಇಲ್ಲಿ ರೂಲಿಂಗ್ ಕೊಡುವ ಅವಶ್ಯಕತೆ ಇಲ್ಲ.

Protem Speaker:- One at a time ಮಾನ್ಯ ರಾಯರೆಡ್ಡಿಯವರೆ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಈಗ ಕೆಲವು ಸಂಪ್ರದಾಯಗಳು ನಡೆದುಕೊಂಡು ಬಂದಿವೆ. ಲೋಕಸಭೆಯಲ್ಲಿ ಸಹ ಅನೇಕ ಸಂದರ್ಭದಲ್ಲಿ ಈ ರೀತಿಯ ಘಟನೆಗಳು ಆಗಿ ಚರ್ಚೆ ಆಗಿ ಒಂದು ರೀತಿಯ ಸಂಪ್ರದಾಯಗಳು ನಡೆದುಕೊಂಡು ಬಂದಿದೆ, ಅವಕಾಶಗಳು ಸಿಕ್ಕಿವೆ. ಆದರೆ ಹಿರಿಯ ಸಚಿವರಾದಂತಹ ಮಾನ್ಯ ಪ್ರಕಾಶ್ ಅವರು ಹೇಳಿದಂತಹ ಮಾತು, ಸಂವಿಧಾನದ ಚೌಕಟ್ಟಿನಲ್ಲಿ ಏನು ಇದೆ ಅದರಂತೆ ಅನುಸರಿಸುವುದು ಎಲ್ಲರ ದೃಷ್ಟಿಯಿಂದ ಒಳ್ಳೆಯದು. ಅದನ್ನು ನಮ್ಮ ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡರೆ ಸಾಕು. ಇದನ್ನು ಬಹಳ ಗಂಭೀರವಾಗಿ ಚರ್ಚೆ ಮಾಡದೇ ಮುಂದಿನ ಪ್ರಮಾಣ ವಚನ ಸ್ವೀಕಾರಕ್ಕೆ ಅವಕಾಶ ಮಾಡಿಕೊಡಬೇಕು.

ಹಂಗಾಮಿ ಅಧ್ಯಕ್ಷರು:– ಈಗಾಗಲೇ ಈ ವಿಚಾರದ ಬಗ್ಗೆ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಪ್ರಸ್ತಾಪ ಮಾಡಿದ್ದಾರೆ, ಅದರ ಪ್ರಕಾರ ಹಿರಿಯ ಸದಸ್ಯರುಗಳಾದ ಮಾನ್ಯ ಯಡಿಯೂರಪ್ಪನವರು, ಶ್ರೀ ವಾಟಾಳ್ ನಾಗರಾಜ್ ಅವರೂ ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾವು ನಿರ್ಣಯ : ರೂಲಿಂಗ್ ಕೊಡಬೇಕಾದರೆ ನ್ಯಾಯಬದ್ಧವಾಗಿ, ಸಂವಿಧಾನಬದ್ಧವಾಗಿ ಕೊಡಬೇಕಾಗುತ್ತದೆ. ಹಾಗಾಗಿ ಆ ನಿರ್ಣಯವನ್ನು ನಾನು ರಿಸರ್ವ್ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಿರ್ಣಯವನ್ನು ರಿಸರ್ವ್ ಮಾಡುವುದಕ್ಕೆ ಆಗುವುದಿಲ್ಲ.

ಹಂಗಾಮಿ ಅಧ್ಯಕ್ಷರು:– ರಿಸರ್ವ್ ಆಗಿರುವ ಬಗ್ಗೆ ನೀವು ಪ್ರಶ್ನೆ ಮಾಡುವ ಹಾಗಿಲ್ಲ. ಈಗ ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿ.

XXX ಮಾನ್ಯ ಹಂಗಾಮಿ ಅಧ್ಯಕ್ಷರ ಆದೇಶದ ಮೇರೆಗೆ ದಾಖಲಿಸಿರುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಎಂ.ಪಿ. ಪ್ರಕಾಶ್ ಅವರು ಹೇಳಿದ ಪ್ರಕಾರ ಬೇರೆ ಬೇರೆ ಹೆಸರಿನಲ್ಲಿ ತೆಗೆದುಕೊಂಡರೆ ಅಸಿಂಧು ಆಗುತ್ತದೆ.

ಹಂಗಾಮಿ ಅಧ್ಯಕ್ಷರು:– ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ತಮ್ಮ ಅಭಿಪ್ರಾಯವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಿಮ್ಮ ಅಭಿಪ್ರಾಯವನ್ನೂ ನಾನು ಕೇಳಿದ್ದೇನೆ. ಇದರ ಬಗ್ಗೆ ನಾನು ಇವತ್ತೆ ನಿರ್ಣಯ ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕರಿಸಬೇಕು, ಪ್ರಮಾಣ ವಚನ ಕಾರ್ಯಕ್ರಮ ನಡೆಯಲಿ.

ಶ್ರೀ ವಾಟಾಳ್ ನಾಗರಾಜ್:– ತಮಗೆ ಗೌರವ ಕೊಟ್ಟು ನಾವು ಮಾತನಾಡುತ್ತಿದ್ದೇವೆ. ತಾವು ತಕ್ಷಣ ಅದಕ್ಕೆ ನೇರವಾಗಿ ತೀರ್ಪನ್ನು ಕೊಡಬೇಕು. ಆದ್ದರಿಂದ ಪ್ರಮಾಣ ವಚನ ಕಾರ್ಯಕ್ರಮವನ್ನು ಮುಂದೂಡಿ.

ಗೊಂದಲ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೇ, ತಾವು ತೀರ್ಪನ್ನು ರಿಸರ್ವ್ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಅದು ಪ್ರಮಾಣ ವಚನದ ಸಿಂಧುತ್ವದ ಪ್ರಶ್ನೆ. ಸದಸ್ಯರ ಸಿಂಧುತ್ವದ ಪ್ರಶ್ನೆ. ಆದ್ದರಿಂದ ರೂಲಿಂಗ್ ಅನ್ನು ರಿಸರ್ವ್ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಸಚಿವರು):– ಮಾನ್ಯ ಅಧ್ಯಕ್ಷರೇ, ಕ್ಲಿಯರ್ ರೂಲಿಂಗ್ಸ್ ಇವೆ, ಜಡ್ಜ್‌ಮೆಂಟ್ಸ್ ಇವೆ ಎಂದು ಹೇಳಿ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಶ್ರೀ ಪ್ರಕಾಶ್ ಅವರು ಸದನದ ಮುಂದೆ ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದಾರೆ. ಯಾರೇ ಓತ್ ತೆಗೆದುಕೊಳ್ಳಬೇಕಾದರೂ ಕೂಡ ಇಲ್ಲಿ ಭಗವಂತನ ಹೆಸರಿನಲ್ಲಿ ತೆಗೆದುಕೊಳ್ಳಲಿ ಅಥವಾ ಸತ್ಯ, ನಿಷ್ಠೆಯಿಂದ ತೆಗೆದುಕೊಳ್ಳಲಿ, ಇವೆರಡು ಸಾಕು.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಇಲ್ಲಿಗೆ ಈ ವಿಚಾರ ಮುಕ್ತಾಯವಾಗಬಹುದು. ನಾನು ಕೋರ್ಟ್ ಮಾಡಿದ್ದು ಗುಜರಾತ್ ಹೈಕೋರ್ಟಿನ ಜಡ್ಜ್‌ಮೆಂಟ್. ನಮ್ಮ ಮೇಲೆ ಸ್ಟ್ರಿಕ್ಟಾಗಿ ಅದು ಅಪ್ಲೈ ಆಗತಕ್ಕಂಥದ್ದು ಏನೂ ಇಲ್ಲ. ಸಬ್‌ಸ್ಟ್ಯಾಂಟೀವ್ ಮ್ಯಾಟರ್ಸ್‌ನಲ್ಲಿ ಭಿನ್ನಭಿಪ್ರಾಯ ಆಗಿದ್ದರೆ ಇದನ್ನು ಸರಿಪಡಿಸಿಕೊಳ್ಳಬಹುದು. It is a curable defect ಎಂದೂ ಕೂಡ ಹೇಳುತ್ತಾರೆ. ಆದ್ದರಿಂದ ಅವರು ಅಸಿಂಧು ಎನ್ನುವುದಾದರೂ ಕೂಡ ಇದರಲ್ಲಿ ಒಂದು ಪ್ರಸ್ತಾಪ ಏನು ಹೇಳುತ್ತಾರೆ ಎಂದರೆ,

"The above case is not sufficient to show that the non-compliance with the provisions of the statue or the Constitution will not necessarily render a proceeding invalid, if by considering its nature, its design and the consequences which follow from its non-observance, one is not led to the conclusion that the legislature or a Constitution maker intend that there should be no departure from the strict words used. However, if it differs on the substantial nature of the whole thing... I uphold the sovereignty and integrity of this Country is a substantial matter. In that if the changes something.

ಅದು ತಪ್ಪಾಗುತ್ತದೆ. ಭಗವಂತನ ಹೆಸರಿನಲ್ಲಿ ಮಾಡಬಹುದು. ಬೇರೆ ಹೆಸರಿನಲ್ಲಿ ಮಾಡಬಾರದು ಎಂದೇ ನಿರ್ಣಯ. ಆದರೆ ಅದನ್ನು ಸರಿಪಡಿಸಬಹುದು ಕೂಡ ಇದೆ.

ಹಂಗಾಮಿ ಅಧ್ಯಕ್ಷರು:– ಈಗ ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈ ಪ್ರಮಾಣ ವಚನ ಯಾವ ಪ್ರಕಾರ ಇರಬೇಕೆಂಬ ವಿಚಾರವನ್ನು ಗಮನಕ್ಕೆ ತಂದಿದ್ದಾರೆ. ಹಲವಾರು ಸದಸ್ಯರೂ ಸಹ ಈ ವಿಚಾರವನ್ನು ಸಭೆಯ ಗಮನಕ್ಕೆ ತಂದಿದ್ದಾರೆ. ಇವತ್ತು ಸಂವಿಧಾನದ ಪ್ರಕಾರ ಪ್ರಮಾಣ ವಚನ ತೆಗೆದುಕೊಳ್ಳುವುದಕ್ಕೆ ಒಂದು ಫಾರ್ಮ್ಯಾಟ್ ಇದೆ. ಆ ಪ್ರಕಾರ ಎಲ್ಲಾ ಸದಸ್ಯರೂ ಪ್ರಮಾಣ ವಚನ ತೆಗೆದುಕೊಳ್ಳಬೇಕೆಂದು ಹೇಳಿ ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ. ಫಾರ್ಮ್ಯಾಟ್ ಪ್ರಕಾರ ದೇವರ ಹೆಸರಿನಲ್ಲಿ ಅಥವಾ ಸತ್ಯ, ನಿಷ್ಠೆ ಹೆಸರಿನಲ್ಲಿ ಪ್ರಮಾಣ ವಚನ ತೆಗೆದುಕೊಳ್ಳಬಹುದು.

1.00 ಪಿಎಂ

Sri M.P. Prakash:- Your contention is upheld.

12. ಪ್ರಮಾಣ ವಚನ ಸ್ವೀಕಾರ (ಮುಂದು)

ಶ್ರೀ ಮುನಿಯಪ್ಪ ಎಸ್.ಎಂ.	ಚಿಕ್ಕಬಳ್ಳಾಪುರ	ಕನ್ನಡ
ಶ್ರೀ ಮುನಿಸ್ವಾಮಪ್ಪ ಎಸ್.	ಶಿಡ್ಲಘಟ್ಟ	ಕನ್ನಡ
ಶ್ರೀಮತಿ ನಾಗಮಣಿ ಎಂ.ಕೆ.	ಕಿರುಗಾವಲು	ಕನ್ನಡ
ಶ್ರೀ ಬಿ. ನಾಗರಾಜಶೆಟ್ಟಿ	ಬಂಟ್ವಾಳ	ಕನ್ನಡ
ಶ್ರೀ ಎಂ.ಟಿ.ಬಿ. ನಾಗರಾಜು	ಹೊಸಕೋಟೆ	ಕನ್ನಡ
ಶ್ರೀ ಬಿ. ನಂಜಾಮರಿ	ತಿಪಟೂರು	ಕನ್ನಡ
ಶ್ರೀ ಜೆ. ನರಸಿಂಹಸ್ವಾಮಿ	ದೊಡ್ಡಬಳ್ಳಾಪುರ	ಕನ್ನಡ
ಶ್ರೀ ಎ. ನಾರಾಯಣಸ್ವಾಮಿ	ಆನೇಕಲ್	ಕನ್ನಡ
ಶ್ರೀ ಹೆಚ್. ನಿಂಗಪ್ಪ	ಕುಣಿಗಲ್	ಕನ್ನಡ
ಶ್ರೀ ನಿರಾನಿ ಮುರುಗೇಶ್ ರುದ್ರಪ್ಪ	ಬೀಳಗಿ	ಕನ್ನಡ
ಶ್ರೀ ಓಲೇಕಾರ್ ನೆಹರು ಚನ್ನಬಸಪ್ಪ	ಬ್ಯಾಡಗಿ	ಕನ್ನಡ
ಶ್ರೀ ಪದ್ಮನಾಭ ಕೊಟ್ಟಾರಿ ಕೆ.	ವಿಟ್ಲ	ಕನ್ನಡ
ಶ್ರೀ ಪಾಪರೆಡ್ಡಿ ಎ	ರಾಯಚೂರು	ಕನ್ನಡ
ಶ್ರೀ ಪರಮೇಶ್ವರ ನಾಯ್ಕ್ ಪಿ.ಟಿ.	ಹರಪನಹಳ್ಳಿ	ಕನ್ನಡ
ಶ್ರೀಮತಿ ಪರಿಮಳ ಕೆ.ಎಸ್.	ಹನೂರು	ಕನ್ನಡ
ಶ್ರೀ ಪಾಟೀಲ್ ಎಂ.ಬಿ.	ತಿಕೋಟ	ಕನ್ನಡ
ಶ್ರೀ ಪಾಟೀಲ್ ರವಿಕಾಂತ ಶಂಕರಪ್ಪ	ಇಂಡಿ	ಕನ್ನಡ
ಶ್ರೀ ಪಾಟೀಲ್ ಬಿ.ಸಿ.	ಹಿರೇಕೆರೂರು	ಕನ್ನಡ
ಶ್ರೀ ಪಾಟೀಲ್ ಸಿ.ಸಿ.	ನರಗುಂದ	ಕನ್ನಡ
ಶ್ರೀ ಪಾಟೀಲ್ ಡಿ.ಆರ್.	ಗದಗ	ಕನ್ನಡ